# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020

ಫ್ರಾಸಾ-11

ಚಾಸಾ-13

| | | |
|---|---|---|
| ಸಾಕ್ಷಿಯ ಹೆಸರು | - | ಮಂಜುನಾಥ ದೊಡ್ಡಮನಿ |
| ತಂದೆ ಹೆಸರು | - | ರಾಮಚಂದ್ರಪ್ಪ |
| ವಯಸ್ಸು | - | 41 ವರ್ಷ |
| ಉದ್ಯೋಗ | - | ಸಹಾಯಕ ಅಭಿಯಂತರರು , ಹೆಸ್ಕಾಂ ಹುಬ್ಬಳ್ಳಿ |
| ವಾಸಸ್ಥಳ | - | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 23-11-2024. |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ದಿಃ 28-6-2018 ರಿಂದ ನಾನು ಹುಬ್ಬಳ್ಳಿಯ ವಿಶ್ವೇಶ್ವರ ನಗರ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 11-10-2021 ರಂದು ಹುಬ್ಬಳ್ಳಿ ಉಪ ನಗರ ಪೋಲಿಸಠಾಣೆಯ ಸಹಾಯಕ ಪೋಲೀಸ ಆಯುಕ್ತರು ನಮಗೆ ಒಂದು ಪತ್ರ ಬರೆದು ದಿಃ 2-9-2020 ರಂದು ಹುಬ್ಬಳ್ಳಿಯ ದೇಶಪಾಂಡೆನಗರದ ಅಸೆನ್ಸನ್ ಚರ್ಚ ಹತ್ತಿರ ಸಂಜೆ 6 ರಿಂದ ರಾತ್ರಿ 8 ಗಂಟೆ ವರೆಗೂ ವಿದ್ಯುತ್ ಸರಬರಾಜು ಇದ್ದಿತೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದರು. ಸದರಿ ಪತ್ರಕ್ಕೆ ನಾನುದಿಃ 13-11-2021 ರಂದು ಉತ್ತರ ಬರೆದು, ದಿಃ 2-9-2020 ರಂದು ಹುಬ್ಬಳ್ಳಿಯ ದೇಶಪಾಂಡೆನಗರದ ಅಸೆನ್ಸನ್ ಚರ್ಚ ಹತ್ತಿರ ಸಂಜೆ 6 ರಿಂದ ರಾತ್ರಿ 8 ಗಂಟೆ ವರೆಗೂ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗಿರುವುದಿಲ್ಲ ಎಂದು ತಿಳಿಸಿರುತ್ತೇನೆ. 33/11 ಕೆ ವಿ ವಿದ್ಯುತ್ ಉಪ ಕೇಂದ್ರ ಕಿಮ್ಸ ಹುಬ್ಬಳ್ಳಿಯಿಂದ ಸರಬರಾಜಾಗುವ ಫೀಡರನ ದಾಖಲೆಗಳ ಆಧಾರದ ಮೇಲೆ ನಾನು ಸದರಿ ಮಾಹಿತಿಯನ್ನು ನೀಡಿರುತ್ತೇನೆ. ತಾವು ಬರೆದ ಪತ್ರವನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು

ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಪತ್ರವನ್ನು ನಿಶಾನೆ ಪಿಃ 78 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 78 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು 1 ರಿಂದ 4 ನೇ ಆರೋಪಿಗಳ ಪರವಾಗಿ ಶ್ರೀ ವಿ. ಜಿ .ಎಚ್ ವಕೀಲರಿಂದಃ**

3. ದಿಃ 11-10-2021 ರಂದು ಎ ಸಿಪಿ ಹುಬ್ಬಳ್ಳಿ ಉಪ ನಗರ ಪೋಲಿಸಠಾಣೆ ಇವರು ನನಗೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮೇಲ್ಕಂಡ ಫೀಡರನ್ನು ಪರಿಶೀಲಿಸಿರುವುದಿಲ್ಲವಾದರೂ ಸಹ ಪೋಲೀಸರ ಮಾತು ಕೇಳಿ ನಿಶಾನೆ ಪಿಃ 78 ರಂತೆ ನಾನು ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳೆಲ್ಲ ಸುಳ್ಳು ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**( ಬಿ. ಜಿ. ರಮಾ )**

ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ

ನ್ಯಾಯಾಧೀಶರು, ಧಾರವಾಡ.

ಎನ್.ಡಿ.ಪಿ.ಎಸ್. ಸಂಖ್ಯೆ 7/2020
ಫ್ರಾಸಾ.11